# ಪರಿಶುದ್ಧತೆ



ಮನುಷ್ಯನಿಗೆ ಭಗವಂತನಲ್ಲಿ ವಿಶ್ವಾಸವಿಲ್ಲ; ಅದಕ್ಕಾಗಿಯೆ ಆತ ಅಷ್ಟೊಂದು ದುಃಖವನ್ನು ಅನುಭವಿಸುವುದು. ಜನ ಹೇಳುತ್ತಾರೆ, 'ಗಂಗಾಸ್ನಾನದ ಸಮಯದಲ್ಲಿ ಜನರ ಪಾಪಗಳೆಲ್ಲ ಅವರವರನ್ನು ಬಿಟ್ಟು ಗಂಗೆಯ ತೀರದಲ್ಲಿರುವ ಗಿಡಗಳ ಮೇಲೆ ಕುಳಿತುಕೊಂಡಿರುತ್ತವೆ. ಸ್ನಾನ ಮುಗಿಸಿ ದಡಕ್ಕೆ ಬರುವುದೇ ತಡ ಒಡನೆಯೆ ಅವು ನೆಗೆದು ಅವರವರ ಹೆಗಲನ್ನು ಹತ್ತಿಬಿಡುತ್ತವೆ' ಎಂದು. ದೇಹತ್ಯಾಗದ ಸಮಯದಲ್ಲಿ ಭಗವಂತನ ಚಿಂತನೆ ಬರಬೇಕಾದರೆ, ಬದುಕಿರುವಾಗಲೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ- ಅಭ್ಯಾಸಯೋಗ, ಭಗವಚ್ಚಿಂತನೆಯ ಅಭ್ಯಾಸವನ್ನು ಮಾಡಿದ್ದರೆ ಜೀವನದ ಕೊನೆಯ ದಿನವೂ ಆತನ ಭಾವನೆ ಮನಸ್ಸಿನಲ್ಲಿ ಏಳುತ್ತದೆ.

*(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೧೧೨)*

ವ್ಯಾಕುಲ ಹೃದಯದಿಂದ ಆತನಿಗೆ ಪ್ರಾರ್ಥನೆ ಸಲ್ಲಿಸು; ಆತನಿಗಾಗಿ ಅಳು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ನಿರ್ಮಲವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಭಕ್ತನ 'ನಾನು' ಎಂಬ ರೂಪಿನ ಕನ್ನಡಿಯಲ್ಲಿ ಸಗುಣ ಬ್ರಹ್ಮನ, ಆದ್ಯಾಶಕ್ತಿಯ ದರ್ಶನ ದೊರೆಯುತ್ತದೆ. ಆದರೆ ಕನ್ನಡಿಯನ್ನು ಬಹಳ ಚೆನ್ನಾಗಿ ಒರೆಸಬೇಕು. ಕೊಳೆ ಕುಳಿತಿದ್ದರೆ ಸರಿಯಾದ ಪ್ರತಿಬಿಂಬ ಬೀಳದು. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೧೧೮)*

ನರೇಂದ್ರ: ''ಆತ ಅವಾಙ್ಮಾನಸಗೋಚರ.''

ಶ್ರೀರಾಮಕೃಷ್ಣರು: ''ಅಲ್ಲ, ಅದು ಸರಿಯಲ್ಲ. ಆತ ಶುದ್ಧ ಬುದ್ಧಿಗೆ ಗೋಚರ. ಶುದ್ಧ-ಬುದ್ಧಿ ಎಂದರೂ ಒಂದೇ, ಶುದ್ಧ-ಆತ್ಮ ಎಂದರೂ ಒಂದೇ. ಋಷಿಗಳು ಶುದ್ಧ-ಬುದ್ಧಿ— ಶುದ್ಧ-ಆತ್ಮದ ಮೂಲಕ ಶುದ್ಧ ಆತ್ಮನ ಸಾಕ್ಷಾತ್ಕಾರವನ್ನು ಪಡೆದರು.

*(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೨೬೧)*

ಜೀವಿ ಶುದ್ಧನಾಗದ ಹೊರತು ಭಗವಂತನಲ್ಲಿ ಶ್ರದ್ಧೆ ಭಕ್ತಿ ಉಂಟಾಗದು — ಮನಸ್ಸು ಏಕಾಗ್ರವಾಗದು, ಸಿಕ್ಕಿಸಿಕ್ಕಿದ ಕಡೆಗೆ ಹರಿದುಹೋಗುತ್ತಿರುತ್ತದೆ. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೨೨೭)*

ವೇದಾಂತ ಹೇಳುತ್ತದೆ, 'ಚಿತ್ತ ಪರಿಶುದ್ಧವಾಗಿಲ್ಲದೆ ಇದ್ದರೆ ಭಗವಂತನನ್ನು ಪಡೆಯಬೇಕು ಎಂಬ ಇಚ್ಛೆಯೆ ಬರದು' ಅಂತ. ಹಿಂದಿನ ಜನ್ಮದಲ್ಲಿಯೇ ಆಗಲಿ ಅಥವಾ ಈ ಜನ್ಮದಲ್ಲಿಯೆ ಆಗಲಿ ವಿಶೇಷವಾಗಿ ತಪಸ್ಸು ಮಾಡದಿದ್ದರೆ ಸರಳತೆ ಉದಾರತೆ ಉಂಟಾಗದು. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೩೭)*

ಆತ ಮನಸ್ಸಿಗೆ ಅಗೋಚರನೇನೊ ನಿಜ — ಆದರೆ ಶುದ್ಧ ಮನಸ್ಸಿನಲ್ಲಿ ಗೋಚರನಾಗುತ್ತಾನೆ. ಈ ಬುದ್ಧಿಗೇನೊ ಆತ ಗೋಚರನಲ್ಲ—ಆದರೆ ಶುದ್ಧ ಬುದ್ಧಿಗೆ ಗೋಚರನಾಗುತ್ತಾನೆ. ಕಾಮಕಾಂಚನಾಸಕ್ತಿ ನಮ್ಮನ್ನು ಬಿಟ್ಟು ತೊಲಗಿತು ಎಂದರೆ, ಮನಸ್ಸು ಮತ್ತು ಬುದ್ಧಿ ಶುದ್ಧವಾಗಿಬಿಡುತ್ತದೆ. ಆಗ ಶುದ್ಧ ಮನಸ್ಸು ಶುದ್ಧ ಬುದ್ಧಿ ಅನನ್ಯವಾಗಿಬಿಡುತ್ತದೆ. ಆತ ಶುದ್ಧ ಮನಸ್ಸಿಗೆ ಗೋಚರನಾಗುತ್ತಾನೆ. ಋಷಿಗಳು, ಮುನಿಗಳು ಆತನ ದರ್ಶನ ಪಡೆಯಲಿಲ್ಲವೇನು? ಅವರು ತಮ್ಮ ವ್ಯಕ್ತಿ ಚೈತನ್ಯದ ಮೂಲಕ ವಿಭುಚೈತನ್ಯದ ಸಾಕ್ಷಾತ್ಕಾರ ಪಡೆದುಕೊಂಡರು. *(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೨೫೧)*

ರೂಪ, ರಸ, ಗಂಧ, ಸ್ಪರ್ಶ, ಶಬ್ದ — ಈ ವಸ್ತುಗಳ ಮೇಲಿನ ಆಸಕ್ತಿ ಮನಸ್ಸಿನಲ್ಲಿ ಒಂದು ಕಿಂಚಿತ್ತೂ ಇರಕೂಡದು. ಆಗ ಮಾತ್ರವೇ ಮನಸ್ಸು ಶುದ್ಧವಾಗುತ್ತದೆ. ಶುದ್ಧ ಮನಸ್ಸೇ ಶುದ್ಧ ಆತ್ಮ. ಅಂಥ ಮನಸ್ಸಿನಲ್ಲಿ ಕಾಮಕಾಂಚನಾಸಕ್ತಿ ಕಿಂಚಿತ್ತೂ ಇರದು. ಮನಸ್ಸು ಶುದ್ಧವಾದಾಗ ಇನ್ನೊಂದು ಅನುಭವ ದೊರೆಯುತ್ತದೆ. ಅನುಭವವಾಗುತ್ತದೆ : 'ಭಗವಂತನೇ ಕರ್ತ, ನಾನು ಅಕರ್ತ.' *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೩೫೧)*

ಚಿತ್ತಶುದ್ಧಿಯಾಯಿತು ಎಂದರೆ, ವಿಷಯಾಸಕ್ತಿ ಹೊರಟು ಹೋಯಿತು ಅಂದರೆ, ವ್ಯಾಕುಲತೆಯುಂಟಾಗುತ್ತದೆ. ಆಗ ಮಾತ್ರವೇ ನಿನ್ನ ಪ್ರಾರ್ಥನೆ ಭಗವಂತನನ್ನು ಮುಟ್ಟುತ್ತದೆ. ಟೆಲಿಗ್ರಾಫ್ ತಂತಿಯಲ್ಲಿ ಬೇರೆ ವಸ್ತು ಬೆರೆತುಕೊಂಡಿದ್ದರೆ ಅಥವಾ ಅದು ಕಿತ್ತುಹೋಗಿದ್ದರೆ ವಾರ್ತೆಯನ್ನು ಅದು ಹೊತ್ತುಕೊಂಡು ಹೋಗಲಾರದು.

ಯೋಗ ಯಾವುದರಿಂದ ದೊರೆಯುತ್ತದೆ? ಒಮ್ಮೆಗೇ ವಿಷಯಾಸಕ್ತಿಯನ್ನು ತ್ಯಾಗ ಮಾಡುವುದರಿಂದ. ಯಾವ ನ್ಯೂನತೆಯೂ ಇಲ್ಲದ ಟೆಲಿಗ್ರಾಫ್ ತಂತಿಯ ಹಾಗೆ ಮನಸ್ಸು ಕಳಂಕರಹಿತವಾಗಿಯೂ ಶುದ್ಧವಾಗಿಯೂ ಇರಬೇಕು. *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೩೮೫)*

ಯೋಗ ನಿತ್ಯವನ್ನು ಮುಟ್ಟುವುದರ ಹೆಸರೇ ಬ್ರಹ್ಮಜ್ಞಾನ. ಅದನ್ನು ಗಳಿಸಿಕೊಳ್ಳುವುದು ಬಹಳ ಕಷ್ಟ. ಸಂಪೂರ್ಣವಾಗಿ ವಿಷಯಬುದ್ಧಿ ಹೋಗದ ಹೊರತು ಅದು ದೊರೆಯುವುದಿಲ್ಲ.

*(ಶ್ರೀರಾಮಕೃಷ್ಣ ವಚನವೇದ, ಸಂ.೨, ಪು.೨೯೫)*

ಶ್ರೀರಾಮಕೃಷ್ಣ ವಚನವೇದದಿಂದ